

ನಾನು ಸುಳ್ಳು ಸುಳ್ಳೇ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ಓಡಾಡುವ ಮನುಷ್ಯ ಎಂಬಂತೆ ಜನರು ನನ್ನ ಬಗೆಗೆ ಮಾತಾಡುತ್ತಾರೆ. ನಾನು ಯಾವುದೇ ಅಧಿಕಾರದಲ್ಲಿ ಇಲ್ಲವಾದರೂ ನನ್ನ ಗೂಢಚಾರರು ಈ ಮಾಹಿತಿ ಉಚಿತವಾಗಿ ನೀಡಿದ್ದಾರೆ. ಒಂದು ಉದಾಹರಣೆ ಎಂದರೆ ನಾನು ಬೆಂಗಳೂರಿನ ಬ್ಯಾಡರಹಳ್ಳಿ ಎಂಬ ಊರಿಗೆ ಬಂದು ಉಳಿಯತೊಡಗಿದ ಬಳಿಕ ಈ ಹಳ್ಳಿಗೆ ಈ ಹೆಸರು ಹೇಗೆ ಬಂದಿತು ಎಂದು ಕೇಳಿದೆ, ಉತ್ತರ ಸಿಕ್ಕಿತು. ಕಬ್ಬಾಳಮ್ಮನ ದೇವಾಲಯ ಇದೆ, ಈ ಹೆಸರು ಹೇಗೆ ಬಂದಿತು ಎಂದು ಕೇಳಿದೆ, ಉತ್ತರ ಸಿಕ್ಕಲಿಲ್ಲ. ಉತ್ತರ ಖಂಡಿತವಾಗಿ ಇದೆ. ಆದರೆ ಮೊದಲ ಪ್ರಶ್ನೆಗೆ ಉತ್ತರಿಸಿದ ವ್ಯಕ್ತಿಗೆ ಎರಡನೇ ಪ್ರಶ್ನೆಗೆ ಉತ್ತರ ಗೊತ್ತಿರಲಿಲ್ಲ. ಎಲ್ಲರಿಗೂ ಎಲ್ಲವೂ ತಿಳಿದಿರಬೇಕಾಗಿಲ್ಲ, ಅದು ನನಗೆ ಗೊತ್ತು. ಅವರಿಗೆ ಗೊತ್ತಿರಲಿಲ್ಲ. ಆದುದರಿಂದ ಅವರು ನನ್ನ ಕುರಿತು ಸಂದೇಹ ತಾಳಿದರು. ತನ್ನ ಮುಖಭಂಗಕ್ಕಾಗಿಯೇ ನಾನು ಪ್ರಶ್ನೆಗಳನ್ನು ಕೇಳುತ್ತ ಹೋಗುತ್ತೇನೆ ಎಂದು ಅವರು ಭಾವಿಸಿದರು. ಆ ಸನ್ಮಿತ್ರರೂ ನನ್ನನ್ನು ಬುದ್ಧಿಜೀವಿ ಎಂದು 'ಆಡಿಕೊಂಡರಂತೆ'. ಅದೇನೇ ಇರಲಿ, ಬುದ್ಧಿಜೀವಿ ಎಂದರೇನು ಎಂಬ ಕುರಿತು ನಾನೀಗ ತಿಳಿದುಕೊಳ್ಳಲೇಬೇಕು ಎಂದು ನಿಶ್ಚಯಿಸಿರುವೆ. ಲೋಕಾಪವಾದಕ್ಕೆ ಹೆದರಿ 'ಕಾಲಿಗೆ ಬುದ್ಧಿ ಹೇಳು'ವವನಲ್ಲ ನಾನು.

ಕುಳಿತು ಯೋಚಿಸಿದೆ: ಬುದ್ಧಿಜೀವಿಯು ಬುದ್ಧಿಯಿಂದ ಅಥವಾ ಬುದ್ಧಿಗಾಗಿ ಜೀವಿಸುವ ವ್ಯಕ್ತಿಯಾಗಿದ್ದಿರಬೇಕು – ಇದು ನನ್ನ ಮೊದಲ ಯೋಚನೆ. ಅದನ್ನು ಒಂದೆಡೆ ಬರೆದಿಟ್ಟುಕೊಂಡೆ. ಅದು ಮುಂದಿನ ಹಂತದಲ್ಲಿ ಶೋಧಿಸಬೇಕಾದುದು. ಅದಕ್ಕೂ ಮೊದಲು ಬುದ್ಧಿ ಎಂದರೆ ಏನೆಂದು ತಿಳಿದುಕೊಳ್ಳಬೇಕು, ಇದೇ ನನ್ನ ಜಿಜ್ಞಾಸೆಯ ಆರಂಭದ ಬಿಂದು ಎಂದು ಗುರುತಿಸಿಕೊಂಡೆ.

ಮನುಷ್ಯ 'ಬುದ್ಧಿ ಉಳ್ಳ ಪ್ರಾಣಿ'. ಬುದ್ಧಿ ಎಂಬ ಪದಕ್ಕೆ ಜ್ಞಾನ, ತಿಳಿವಳಿಕೆ, ಎಚ್ಚರಿಕೆ, ನಿರೀಕ್ಷೆ, ವಿಮರ್ಶೆ, ತರ್ಕ, ಕಲ್ಪನೆ ಎಂಬೆಲ್ಲಾ ಅರ್ಥಗಳನ್ನು ಶಬ್ದಕೋಶ ನೀಡುತ್ತದೆ. ಇವೆಲ್ಲ ಲಕ್ಷಣಗಳಿದ್ದರೆ 'ಬುದ್ಧಿವಂತ' (ಹಾಗೆ ರೂಪುಗೊಂಡವನು 'ಬುದ್ಧ'), ಇವುಗಳಲ್ಲಿ ಒಂದು ಅಂಶ ಇಲ್ಲವಾದರೂ ಅವನು ಆ ಮಟ್ಟಿಗೆ 'ಬುದ್ಧಿಗೇಡಿ'. ಹಿರಿಯರು ಕಿರಿಯರಿಗೆ 'ಬುದ್ಧಿವಾದ' ಹೇಳುವುದು ಸಹಜ. ಆದರೆ ಬುದ್ಧಿವಾದ ಹೇಳಲು ಹಿರಿಯರಿಗೆ ಬುದ್ಧಿ ಇರಬೇಕಾಗುತ್ತದೆ ಮತ್ತು ಅದನ್ನು ಸ್ವೀಕರಿಸುವ ಮನೋಭಾವ ಕಿರಿಯರಲ್ಲಿ ಇರಬೇಕಾಗುತ್ತದೆ. ಆಗ ಮಾತ್ರ ಈ ಪ್ರಕ್ರಿಯೆ ಸರಾಗವಾಗಿ ಮುಂದುವರಿಯುತ್ತದೆ. ಆದರೆ ಇದು ಹೀಗೇ ನಡೆಯುತ್ತದೆ ಎಂದು ಹೇಳಲಾಗದು. ಕಿರಿಯರೇ ಹಿರಿಯರಿಗೆ ಬುದ್ಧಿವಾದ ಹೇಳಬಹುದು. ಚಿಂತೆಯಿಲ್ಲ, ಅದು ಯೋಗ್ಯವಾಗಿರಲೂಬಹುದು. ಆದುದರಿಂದ ಆಗ ಹಿರಿಯರು ಸಿಟ್ಟಿನ ಕೈಯಲ್ಲಿ 'ಬುದ್ಧಿ' ಕೊಡಬಾರದು. ಬದಲಾಗಿ ಹಿತವಾದ ಮಾತನ್ನು ಕಿರಿಯರೇ ಹೇಳಿದರೂ ಅದನ್ನು ಹಿರಿಯರು ಸ್ವೀಕರಿಸಬೇಕೆಂದು ಸುಭಾಷಿತವಿದೆ. ಅಂದರೆ ಬುದ್ಧಿವಂತಿಕೆಯು ವಯಸ್ಸಿಗೆ ಸಂಬಂಧಿಸಿದ ಸಂಗತಿಯಲ್ಲ. ಅದು ಯಾವೆಲ್ಲ ಸಂಗತಿಗಳಿಂದ ರೂಪುಗೊಳ್ಳುತ್ತದೆ ಎಂಬುದನ್ನೂ ಪರಿಶೀಲಿಸಬೇಕು.

ಈ ಹಂತದಲ್ಲಿ ನನಗೆ ಹಠಾತ್ತನೆ ಗೌರೀಶ ಕಾಯ್ಕಿಣಿಯವರು ನೆನಪಿಗೆ ಬಂದರು. ನಮ್ಮ ಇಡೀ ಊರಿಗೆ ಊರೇ ಅವರ ಬುದ್ಧಿವಂತಿಕೆಯನ್ನು ಕೊಂಡಾಡುತ್ತಿತ್ತು ಮತ್ತು ಗೌರವದಿಂದ ಕಾಣುತ್ತಿತ್ತು. ಕನ್ನಡದಲ್ಲಿ ಮೊಟ್ಟ ಮೊದಲಬಾರಿಗೆ ವಿಚಾರವಾದದ ಕುರಿತು ಬರೆದ, ಮಾತನಾಡಿದ ಹಿರಿಯರು ಅವರು. ನಮ್ಮ ವಿಚಾರವಾದ, ಮರಾಠಿಗರ ಬುದ್ಧಿವಾದ ಶಬ್ದಗಳ ಅರ್ಥ ಒಂದೇ. ಕನ್ನಡದಲ್ಲಿ ಬುದ್ಧಿವಾದಕ್ಕೆ ಹಿತೋಪದೇಶ ಎಂಬ ಅರ್ಥಪ್ರತೀತಿ ಬಲವಾಗಿ ಇರುವುದರಿಂದ ಗೌರೀಶ ಮಾಸ್ತರು ವಿಚಾರವಾದ ಎಂಬ ಪದ ರೂಢಿಸಿದರು. ಅವರ ಸುಪ್ರಸಿದ್ಧ ಕೃತಿ 'ವಿಚಾರವಾದ' ಓದದೆ ನನ್ನ ಶೋಧನೆ ಅಪೂರ್ಣವಾಗುತ್ತದೆ ಎಂದು ತೋರಿತು.

ವಿಚಾರವಾದ ಪ್ರತಿಪಾದಿಸುವುದು ಬುದ್ಧಿ ಪ್ರಾಮಾಣ್ಯವನ್ನು. ಒಂದು ಸಂಗತಿಯ ಸತ್ಯಾಸತ್ಯತೆ